LAND CONVERSION COPY.

62

**ಕರ್ನಾಟಕ ಸರ್ಕಾರ**

ನಂ:ಎಎಲ್‌ಎನ್(ಎಜೆ) ಸಿಆರ್: 322/12-13

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು, ದಿನಾಂಕ: 21-11-2013.

**ಅಧಿಕೃತ ಜ್ಞಾಪನ**

ವಿಷಯ:- ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹಾರಗದ್ದೆ ಗ್ರಾಮದ ಸ.ನಂ. 272/1 ರಲ್ಲಿ 0-15 ಗುಂಟೆ, 272/2ರಲ್ಲಿ 0-16 ಗುಂಟೆ, 272/3ರಲ್ಲಿ 0-16 ಗುಂಟೆ, 276/1ಎ ರಲ್ಲಿ 0-16 ಗುಂಟೆ ಪೈಕಿ 0-09 ಗುಂಟೆ, 276/1ಬಿ ರಲ್ಲಿ 0-13 ಗುಂಟೆ ಪೈಕಿ 0-06 ಗುಂಟೆ ಒಟ್ಟು **1-22 ಎಕರೆ ಗುಂಟೆ** ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ **ವಾಸದ ಉದ್ದೇಶಕ್ಕೆ** ಮತ್ತು ಸ.ನಂ.276/1ಎ ರಲ್ಲಿ 0-07 ಗುಂಟೆ, ಸ.ನಂ.276/1ಬಿ ರಲ್ಲಿ 0-07 ಗುಂಟೆ ಒಟ್ಟು **0-14 ಗುಂಟೆ** ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ **ಕೈಗಾರಿಕಾ ಉದ್ದೇಶಕ್ಕೆ** ಭೂ ಪರಿವರ್ತನೆ ಕೋರಿ ಶ್ರೀ ಹೆಚ್.ಎಸ್. ನಂಜಪ್ಪ ಬಿನ್ ಲೇಟ್ ಎ. ಸಿದ್ದಲಿಂಗಪ್ಪ ಮತ್ತು ಶ್ರೀ ಹೆಚ್.ಎಸ್ ಬಸವರಾಜು ಬಿನ್ ಲೇಟ್ ಎ. ಸಿದ್ದಲಿಂಗಪ್ಪ, ಶ್ರೀ ಹೆಚ್.ಎನ್. ಚಂದ್ರಶೇಖರ್ ಬಿನ್ ಹೆಚ್.ಎಸ್. ನಂಜಪ್ಪ, ಶ್ರೀ ಹೆಚ್.ಎನ್. ರಾಜಶೇಖರ್ ಬಿನ್ ಹೆಚ್.ಎಸ್. ನಂಜಪ್ಪ, ಶ್ರೀ ಹೆಚ್.ಎನ್.ಸುಜ್ಞಾನಪ್ರಭು ಬಿನ್ ಹೆಚ್.ಎಸ್.ನಂಜಪ್ಪ ಮತ್ತು ಶ್ರೀ ಹೆಚ್.ಎನ್. ನಿರಂಜನಮೂರ್ತಿ ಬಿನ್ ಹೆಚ್.ಎಸ್. ನಂಜಪ್ಪ, ಹಾರಗದ್ದೆ ಗ್ರಾಮ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು ರವರು ಸಲ್ಲಿಸಿರುವ ಅರ್ಜಿ ದಿನಾಂಕ: 07-02-2013.

ಉಲ್ಲೇಖ:-
1) ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ 7 ಎಲ್‌ಜಿಪಿ 95 ದಿನಾಂಕ: 7-6-1999.
2) ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್.ಡಿ:56:ಎಲ್‌ಜಿಪಿ 2008 ದಿನಾಂಕ:10-9-2008 ಮತ್ತು 24-9-2008.
3) ತಹಶೀಲ್ದಾರ್, ಆನೇಕಲ್ ತಾಲ್ಲೂಕು, ರವರ ವರದಿ ಸಂಖ್ಯೆ: ಸಂ:ಎಎಲ್‌ಎನ್(ಎಸ್) ಸಿಆರ್ 282/12-13 ದಿನಾಂಕ: 16-02-2013.
4) ವಾಸದ ಉದ್ದೇಶಕ್ಕೆ ಭೂ ಪರಿವರ್ತನಾ ಶುಲ್ಕ ರೂ 84,398-00, ಕೈಗಾರಿಕಾ ಉದ್ದೇಶಕ್ಕೆ ರೂ.60,984-00 ಹಾಗೂ ಪೋಡಿ ಶುಲ್ಕ ರೂ. 275-00 ಒಟ್ಟು ರೂ.1,45,657-00ಗಳನ್ನು ಚಲನ್ ನಂಬರ್ ದಿ: 30-10-2013 ರಂದು ಎಸ್.ಬಿ.ಎಂ. ಆನೇಕಲ್ ಬ್ರಾಂಚ್ ಗೆ ಅರ್ಜಿದಾರರು ಜಮಾ ಮಾಡಿರುತ್ತಾರೆ.
5) ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ರವರ ಪತ್ರ ಸಂ: ಆಯೋಪ್ರಾ/ಭೂ.ಪ.ಆ/ 69/2013-14 ದಿನಾಂಕ: 26-06-2013

***

ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 95(2), 95(4) ಮತ್ತು 95(7) ರ ಷರತ್ತುಗಳು, ಹಾಗೂ ಷರತ್ತುಗಳಿಗೊಳಪಡಿಸಿ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು 1994 ರ ನಿಯಮ 107(1) ರಂತೆ ವಾಸದ ಉದ್ದೇಶಕ್ಕೆ ಎಕರೆ ಒಂದಕ್ಕೆ ರೂ.54,450-00 (ರೂ.ಐವತ್ನಾಲ್ಕು ಸಾವಿರದ ನಾಲ್ಕು ನೂರಾ ಐವತ್ತು) ಮತ್ತು ಕೈಗಾರಿಕಾ ಉದ್ದೇಶಕ್ಕೆ ಎಕರೆ ಒಂದಕ್ಕೆ ರೂ.1,74,240-00(ಒಂದು ಲಕ್ಷದ ಎಪ್ಪತ್ನಾಲ್ಕು ಸಾವಿರದ ಎರಡು ನೂರ ನಲವತ್ತು ರೂ.ಗಳು ಮಾತ್ರ ) ಗಳಂತೆ ಅರ್ಜಿದಾರರು ಉಲ್ಲೇಖ (4) ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ ಶ್ರೀ ಹೆಚ್.ಎಸ್. ನಂಜಪ್ಪ ಬಿನ್ ಲೇಟ್ ಎ. ಸಿದ್ದಲಿಂಗಪ್ಪ ಮತ್ತು ಶ್ರೀ ಹೆಚ್.ಎಸ್ ಬಸವರಾಜು ಬಿನ್ ಲೇಟ್ ಎ. ಸಿದ್ದಲಿಂಗಪ್ಪ, ಶ್ರೀ ಹೆಚ್.ಎನ್. ಚಂದ್ರಶೇಖರ್ ಬಿನ್ ಹೆಚ್.ಎಸ್. ನಂಜಪ್ಪ, ಶ್ರೀ ಹೆಚ್.ಎನ್. ರಾಜಶೇಖರ್ ಬಿನ್ ಹೆಚ್.ಎಸ್. ನಂಜಪ್ಪ, ಶ್ರೀ ಹೆಚ್.ಎನ್.ಸುಜ್ಞಾನಪ್ರಭು ಬಿನ್ ಹೆಚ್.ಎಸ್.ನಂಜಪ್ಪ ಮತ್ತು

ಶ್ರೀ ಹೆಚ್.ಎನ್. ನಿರಂಜನಮೂರ್ತಿ ಬಿನ್ ಹೆಚ್.ಎಸ್. ನಂಜಪ್ಪ, ಹಾರಗದ್ದೆ ಗ್ರಾಮ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ರವರ ಅರ್ಜಿಯನ್ನು ಪರಿಗಣಿಸಿ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹಾರಗದ್ದೆ ಗ್ರಾಮದ ಸ.ನಂ. 272/1 ರಲ್ಲಿ 0-15 ಗುಂಟೆ, 272/2ರಲ್ಲಿ 0-16 ಗುಂಟೆ, 272/3ರಲ್ಲಿ 0-16 ಗುಂಟೆ, 276/1ಎ ರಲ್ಲಿ 0-16 ಗುಂಟೆ ಪೈಕಿ 0-09 ಗುಂಟೆ, 276/1ಬಿ ರಲ್ಲಿ 0-13 ಗುಂಟೆ ಪೈಕಿ 0-06 ಗುಂಟೆ ಒಟ್ಟು **1-22 ಎಕರೆ ಗುಂಟೆ** ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ **ವಾಸದ ಉದ್ದೇಶಕ್ಕೆ** ಮತ್ತು ಸ.ನಂ.276/1ಎ ರಲ್ಲಿ 0-07 ಗುಂಟೆ, ಸ.ನಂ.276/1ಬಿ ರಲ್ಲಿ 0-07 ಗುಂಟೆ ಒಟ್ಟು **0-14 ಗುಂಟೆ** ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ **ಕೈಗಾರಿಕಾ ಉದ್ದೇಶಕ್ಕೆ** ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1. ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರದಿಂದ ಅಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ)/ಬಿ.ಎಂ.ಆರ್.ಡಿ.ಎ.(ಸ್ಥಳೀಯ ಯೋಜನಾ ಪ್ರಾಧಿಕಾರ/ ಬಿ.ಎಂ.ಐ.ಸಿ.ಎ.ಪಿ.ಎ/ ಮಾಲಿನ್ಯ ನಿಯಂತ್ರಣಾ ಮಂಡಳಿ ರವರಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.

2. ಈ ಭೂ ಪರಿವರ್ತಿತ ಜಮೀನನ್ನು **ಕೈಗಾರಿಕಾ** ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೇ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.

3. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿ.ಎಂ.ಆರ್.ಡಿ.ಎ.(ಸ್ಥಳೀಯ ಯೋಜನಾ ಪ್ರಾಧಿಕಾರ/ ಬಿ.ಎಂ.ಐ.ಸಿ.ಎ.ಪಿ.ಎ/ ಪ್ರಾಧಿಕಾರದಿಂದ ಅನುಮೋದಿಸಿಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್/ ಕಟ್ಟಡ ನಕ್ಷೆಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.

4. ಇತರೆ ಅವಶ್ಯವಾದ ರಸ್ತೆ ಜಾಗ, ರಸ್ತೆ ಮಾರ್ಜಿನ್, ಉದ್ಯಾನವನ, ಸಿ.ಎ ನಿವೇಶನ ಖಾಲಿ ಜಾಗ, ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿ.ಎಂ.ಆರ್.ಡಿ.ಎ.(ಸ್ಥಳೀಯ ಯೋಜನಾ ಪ್ರಾಧಿಕಾರ)/ ಬಿ.ಎಂ.ಐ.ಸಿ.ಎ.ಪಿ.ಎ/ ಪ್ರಾಧಿಕಾರದಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.

5.ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದಿತ ನಕ್ಷೆ ಪಡೆಯದೆ ನಿವೇಶನಗಳನ್ನು/ಕಟ್ಟಡಗಳನ್ನು ನೊಂದಣಾಧಿಕಾರಿಗಳಿಂದ ಉಪನೊಂದಣಾಧಿಕಾರಿಗಳಿಂದ ನೊಂದಾವಣೆ ಮಾಡತಕ್ಕದ್ದಲ್ಲ, ಖಾತೆದಾರರು ಒಂದು ವೇಳೆ ಭೂ ಪರಿವರ್ತನೆ ಮಂಜೂರು ಮಾಡಿರುವ ಜಮೀನಿನ ಪೂರ್ಣ ವಿಸ್ತೀರ್ಣವನ್ನು ಮಾರಾಟ ಮಾಡಲು ಉದ್ದೇಶಿಸಿದಲ್ಲಿ ಆದೇಶದ ಅಡ್ಡಿ ಬರುವುದಿಲ್ಲ.

6. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ರಸ್ತೆ, ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯ ಒದಗಿಸಿಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

7. ಸ.ನಂ.276/1ಎ ರಲ್ಲಿ 0-01 ಮತ್ತು 276/1ಬಿ ರಲ್ಲಿ 0-02 ಗುಂಟೆ ಒಟ್ಟು 0-03 ಗುಂಟೆ ಹಳ್ಳದ ಬಗ್ಗೆ 'ಬಿ' ಖರಾಬು ಇದ್ದು, ಕರ್ನಾಟಕ ಭೂ ಕಂದಾಯ ಕಾಯಿದೆ 1964 ರ ಕಲಂ 67 ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು. ಮತ್ತು ತಹಶೀಲ್ದಾರರವರು ಈ ಬಾಬ್ತು ಆರ್.ಟಿ.ಸಿ.ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

8. ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 7556-665 ಆರ್ ಮತ್ತು ಬಿ-6-54-5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂ. ಪಿ.1/7(11)67, ದಿನಾಂಕ: 01-01-1966 ರಂತೆ ಸರ್ಕಾರವು ಕಾಲಕಾಲಕ್ಕೆ ನೀಡುವ ಆದೇಶದಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರ್‌ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾಯ್ದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

66

-:ಚೆಕ್ಕುಬಂದಿ :-

| | |
|---|---|
| ಪೂರ್ವಕ್ಕೆ | ಸ.ನಂ. 276/2 |
| ಪಶ್ಚಿಮಕ್ಕೆ | ರಸ್ತೆ |
| ಉತ್ತರಕ್ಕೆ | ಸ.ನಂ. 276, 277 |
| ದಕ್ಷಿಣಕ್ಕೆ | ಸ.ನಂ.273 |

(ಡಾ: ಜಿ.ಸಿ. ಪ್ರಕಾಶ್),
ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

**ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಲಾಗಿದೆ.**

1) ತಹಶೀಲ್ದಾರರು, ಆನೇಕಲ್ ತಾಲ್ಲೂಕು, ಆನೇಕಲ್ ರವರಿಗೆ ಮೂಲ ಕಡತ ಹಾಗೂ ಚಲನ್‌ದೊಂದಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂ. ಭೂ ಪರಿವರ್ತನೆಯಾಗಿದೆ ಎಂದು ಗಣಿಕೀಕೃತ ಆರ್.ಟಿ.ಸಿ.ಯಲ್ಲಿ ಕೂಡಲೇ ನಮೂದಿಸತಕ್ಕದ್ದು. ಮತ್ತು ಈ ಜಮೀನಿಗೆ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿತಗೊಳಿಸತಕ್ಕದ್ದು.
2) ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ,"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-99 ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3) ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ, ಬೆಂಗಳೂರು.
4) ಉಪನಿರ್ದೇಶಕರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು ಉಪವಿಭಾಗ, ಬೆಂಗಳೂರು. ಇವರಿಗೆ ಆರ್.ಟಿ.ಸಿ ಹಾಗೂ ನಕ್ಷೆಯ ಪ್ರತಿಯೊಂದಿಗೆ ಕಳುಹಿಸುತ್ತಾ ಭೂ ಪರಿವರ್ತನಾ ಪೋಡಿ ಕಾರ್ಯವನ್ನು ಜರೂರಾಗಿ ಪೂರೈಸಲು ಸೂಚಿಸಿದೆ.
5) ಉಪ ನೋಂದಣಾಧಿಕಾರಿಗಳು, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಇವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
6) ಅರ್ಜಿದಾರರಾದ ಶ್ರೀ ಹೆಚ್.ಎಸ್. ನಂಜಪ್ಪ ಬಿನ್ ಲೇಟ್ ಎ. ಸಿದ್ದಲಿಂಗಪ್ಪ ಮತ್ತು ಶ್ರೀ ಹೆಚ್.ಎಸ್ ಬಸವರಾಜು ಬಿನ್ ಲೇಟ್ ಎ. ಸಿದ್ದಲಿಂಗಪ್ಪ, ಹಾರಗದ್ದೆ ಗ್ರಾಮ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು ರವರಿಗೆ ದೃಢೀಕೃತ ಅಂಚೆ ಮೂಲಕ ಕಳುಹಿಸಲಾಗಿದೆ.
7) ಹೆಚ್ಚಿನ ಪ್ರತಿ.

ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

**ಕರ್ನಾಟಕ ಸರ್ಕಾರ**

ನಂ:ಎಎಲ್‌ಎನ್(ಎಜೆ) ಎಸ್‌ಆರ್ 322/2012-13

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು, ದಿನಾಂಕ:09-09-2015

**ಪರಿಷ್ಕೃತ ಅಧಿಕೃತ ಜ್ಞಾಪನ**

ವಿಷಯ:- ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹಾರಗದ್ದೆ ಗ್ರಾಮದ ಸರ್ವೆ ನಂ.276/1ಎ ರಲ್ಲಿ 0-07 ಗುಂಟೆ ಮತ್ತು ಸ.ನಂ..276/ಬಿ ರಲ್ಲಿ 0-07 ಗುಂಟೆ ಒಟ್ಟು 0-14 ಗುಂಟೆ ವಿಸ್ತೀರ್ಣದ ಜಮೀನು ವ್ಯವಸಾಯೇತರ **ಕೈಗಾರಿಕಾ** ಉದ್ದೇಶಕ್ಕೆ ಭೂ ಪರಿವರ್ತಿತಗೊಂಡ ಜಮೀನನ್ನು **ವಾಸದ** ಉದ್ದೇಶಕ್ಕೆ ಭೂ ಉಪಯೋಗದ ಬದಲಾವಣೆ ಮಾಡಲು ಕೋರಿ ಶ್ರೀ ಹೆಚ್.ಎನ್. ನಂಜಪ್ಪ, ಹೆಚ್.ಎನ್. ಚಂದ್ರಶೇಖರ್, ಹೆಚ್.ಎನ್. ರಾಜಶೇಖರ್, ಹೆಚ್.ಎನ್. ಸುಜ್ಞಾನಪ್ರಭು ಮತ್ತು ಹೆಚ್.ಎನ್. ನಿರಂಜನಮೂರ್ತಿ ರವರುಗಳ ಪರವಾಗಿ ಜಿ.ಪಿ.ಎ ಹೋಲ್ಡರ್ ಶ್ರೀ ಎಸ್. ವೆಂಕಟರೆಡ್ಡಿ ರವರು ದಿನಾಂಕ: 29-06-2015 ರಂದು ಅರ್ಜಿ ಸಲ್ಲಿಸಿರುವ ಬಗ್ಗೆ.

ಉಲ್ಲೇಖ:- 1.ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಮ ಸಂಖ್ಯೆ: ದಿನಾಂಕ: 21-11-2013

2.ತಹಶೀಲ್ದಾರ್, ಆನೇಕಲ್ ತಾಲ್ಲೂಕು ರವರ ಪತ್ರ ಸಂ.ಎಎಲ್‌ಎನ್(ಜೆ)ಸಿಆರ್ 282/2015-16 ದಿನಾಂಕ: 17-07-2015

3.ಆನೇಕಲ್ ಯೋಜನಾ ಪ್ರಾಧಿಕಾರದ ಪತ್ರ ಸಂ. ಆಯೋಪ್ರಾ/ಭೂ.ಪ.ಅ/314/2015-16 ದಿನಾಂಕ:24-8-2015.

4.ಶ್ರೀ ಹೆಚ್.ಎನ್. ನಂಜಪ್ಪ, ಹೆಚ್.ಎನ್. ಚಂದ್ರಶೇಖರ್, ಹೆಚ್.ಎನ್. ರಾಜಶೇಖರ್, ಹೆಚ್.ಎನ್. ಸುಜ್ಞಾನಪ್ರಭು ಮತ್ತು ಹೆಚ್.ಎನ್. ನಿರಂಜನಮೂರ್ತಿ ರವರುಗಳ ಪರವಾಗಿ ಜಿ.ಪಿ.ಎ ಹೋಲ್ಡರ್ ಶ್ರೀ ಎಸ್. ವೆಂಕಟರೆಡ್ಡಿ ರವರ ದಿನಾಂಕ: 29-06-2015ರ ಮನವಿ.

***

ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹಾರಗದ್ದೆ ಗ್ರಾಮದ ಸರ್ವೆ ನಂ.276/1ಎ ರಲ್ಲಿ 0-07 ಗುಂಟೆ ಮತ್ತು ಸ.ನಂ..276/ಬಿ ರಲ್ಲಿ 0-07 ಗುಂಟೆ ಒಟ್ಟು 0-14 ಗುಂಟೆ ವಿಸ್ತೀರ್ಣದ ಜಮೀನು ವ್ಯವಸಾಯೇತರ **ಕೈಗಾರಿಕಾ** ಉದ್ದೇಶಕ್ಕೆ ಭೂ ಪರಿವರ್ತಿತಗೊಂಡ ಜಮೀನನ್ನು **ವಾಸದ** ಉದ್ದೇಶಕ್ಕೆ ಭೂ ಉಪಯೋಗದ ಬದಲಾವಣೆ ಬಗ್ಗೆ ಪರಿಷ್ಕೃತ ಆದೇಶ ನೀಡಲು ಕೋರಿ ಶ್ರೀ ಹೆಚ್.ಎನ್. ನಂಜಪ್ಪ, ಹೆಚ್.ಎನ್. ಚಂದ್ರಶೇಖರ್, ಹೆಚ್.ಎನ್. ರಾಜಶೇಖರ್, ಹೆಚ್.ಎನ್. ಸುಜ್ಞಾನಪ್ರಭು ಮತ್ತು ಹೆಚ್.ಎನ್. ನಿರಂಜನಮೂರ್ತಿ ರವರುಗಳ ಪರವಾಗಿ ಜಿ.ಪಿ.ಎ ಹೋಲ್ಡರ್ ಶ್ರೀ ಎಸ್. ವೆಂಕಟರೆಡ್ಡಿ ರವರು ದಿನಾಂಕ:29-06-2015ರಂದು ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಮನವಿ ಬಗ್ಗೆ ಪರಿಶೀಲಿಸಿ, ತಹಶೀಲ್ದಾರ್, ಆನೇಕಲ್ ತಾಲ್ಲೂಕು ರವರ ಪತ್ರ ಸಂ.ಎಎಲ್‌ಎನ್(ಜೆ) ಸಿಆರ್ 282/2015-16 ದಿನಾಂಕ: 17-7-2015 ರಂತೆ ವರದಿ ಸಲ್ಲಿಸುತ್ತಾ, ಸದರಿ ಜಮೀನು ಹಾಲಿ ಬಂಜರಾಗಿದ್ದು, ಯಾವುದೇ ಕೈಗಾರಿಕಾ ಕಟ್ಟಡಗಳಾಗಲೀ, ರಸ್ತೆಗಳಾಗಲೀ ಮಾಡಿರುವುದಿಲ್ಲ. ಸದರಿ ಜಮೀನನ್ನು ಕೈಗಾರಿಕಾ ಉದ್ದೇಶದಿಂದ ರದ್ದುಪಡಿಸಿ, ವಾಸದ ಉದ್ದೇಶಕ್ಕೆ ಭೂ ಉಪಯೋಗದ ಬದಲಾವಣೆ ಮಾಡಿಕೊಡಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಉಲ್ಲೇಖ(3)ರಂತೆ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್‌ರವರು ತಮ್ಮ ಪತ್ರ ಸಂ. ಆಯೋಪ್ರಾ/ಭೂ.ಪ.ಅ/314/2015-16 ದಿನಾಂಕ: 24-8-15ರಲ್ಲಿ ಸದರಿ ಜಮೀನು ಕೈಗಾರಿಕಾ ಉದ್ದೇಶಕ್ಕೆ ಕಾಯ್ದಿರಿಸಿದ್ದು, ಪ್ರಾರಂಭಿಕ ದೃಢೀಕರಣ ಪತ್ರ ಸಂ. ಆಯೋಪ್ರಾ/ಭೂ.ಬ/17/2015-16 ದಿನಾಂಕ: 4-8-2015ರಂತೆ ಸದರಿ ಜಮೀನನ್ನು ಕೈಗಾರಿಕೆಯಿಂದ ವಸತಿಗಾಗಿ ಭೂ ಉಪಯೋಗ ಬದಲಾವಣೆ ಮಾಡಲು ಒಪ್ಪಿಗೆ ನೀಡಿರುವುದರಿಂದ ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹಾರಗದ್ದೆ ಗ್ರಾಮದ ಸ.ನಂ.276/1ಎ ರಲ್ಲಿ 0-07 ಗುಂಟೆ ಮತ್ತು ಮತ್ತು ಸ.ನಂ.276/ಬಿ 0-07 ಗುಂಟೆ ಒಟ್ಟು 0-14 ಗುಂಟೆ ವಿಸ್ತೀರ್ಣದ ಜಮೀನು ವ್ಯವಸಾಯೇತರ ವಾಸದ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಬಹುದೆಂದು

Comments



ಮೇಲ್ಕಂಡ ವರದಿಗಳನ್ನಾಧರಿಸಿ, ಜಿಗಣಿ ಹೋಬಳಿ, ಹಾರಗದ್ದೆ ಗ್ರಾಮದ ಸರ್ವೆ ನಂ.276/1ಎ ರಲ್ಲಿ 0-07 ಗುಂಟೆ ಮತ್ತು ಸ.ನಂ.276/ಬಿ ರಲ್ಲಿ 0-07 ಗುಂಟೆ ಒಟ್ಟು 0-14 ಗುಂಟೆ ವಿಸ್ತೀರ್ಣದ **ಕೈಗಾರಿಕಾ** ಉದ್ದೇಶಕ್ಕೆ ಭೂ ಪರಿವರ್ತಿತಗೊಂಡ ಜಮೀನನ್ನು **ವಾಸದ** ಉದ್ದೇಶಕ್ಕೆ ಭೂ ಉಪಯೋಗದ ಬದಲಾವಣೆ **ಮಾಡಿ ಪರಿಷ್ಕೃತ ಆದೇಶ ಹೊರಡಿಸಲಾಗಿದೆ.**

ಉಲ್ಲೇಖ(1)ರ ಅಧಿಕೃತ ಜ್ಞಾಪನದಲ್ಲಿನ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಹಾಗೂ ಈ ಹಿಂದೆ ಕೈಗಾರಿಕಾ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿರುವ ಸಮಯದಲ್ಲಿ ಸರ್ಕಾರಕ್ಕೆ ಪಾವತಿಸಿರುವ ಭೂ ಪರಿವರ್ತನಾ ಶುಲ್ಕಕ್ಕೆ ಹೊಂದಿಸಿಕೊಂಡು ಹೆಚ್ಚುವರಿ ಶುಲ್ಕವನ್ನು ಹಿಂತಿರುಗಿಸುವುದಿಲ್ಲವೆಂಬ ಷರತ್ತನ್ನು ವಿಧಿಸಿದೆ.

ಸಹಿ/-
(ವಿ. ಶಂಕರ್),
ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ,ಬೆಂಗಳೂರು.

ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಲಾಗಿದೆ.

1) ತಹಶೀಲ್ದಾರರು, ಆನೇಕಲ್ ತಾಲ್ಲೂಕು, ರವರಿಗೆ ಗಣಿಕೀಕೃತ ಆರ್.ಟಿ.ಸಿ.ಯಲ್ಲಿ ಕೂಡಲೇ ನಮೂದಿಸಲು ಕಳುಹಿಸಿದೆ.
2) ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ-ಕಾರ್ಯದರ್ಶಿ, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3) ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ, ಬೆಂಗಳೂರು.
4) ಉಪನಿರ್ದೇಶಕರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು ಉಪವಿಭಾಗ, ಬೆಂಗಳೂರು. ಇವರಿಗೆ ಆರ್.ಟಿ.ಸಿ ಹಾಗೂ ನಕ್ಷೆಯ ಪ್ರತಿಯೊಂದಿಗೆ ಕಳುಹಿಸುತ್ತಾ ಭೂ ಪರಿವರ್ತನಾ ಪೋಡಿ ಕಾರ್ಯವನ್ನು ಜರೂರಾಗಿ ಪೂರೈಸಲು ಸೂಚಿಸಿದೆ.
5) ಉಪ ನೋಂದಣಾಧಿಕಾರಿಗಳು, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಇವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
6) ಅರ್ಜಿದಾರರಿಗೆ ದೃಢೀಕೃತ ಅಂಚೆ ಮೂಲಕ ಕಳುಹಿಸಲಾಗಿದೆ.
7) ಹೆಚ್ಚಿನ ಪ್ರತಿ.

ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.